2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರ ನ್ಯಾಯಾಲಯದಲ್ಲಿ,
ಬೆಳಗಾವಿ.

ಸೇಷನ್ ಕೇಸ್ ನಂ.191/2025

ಪಿ.ಡಬ್ಲ್ಯೂ: 05

ಸಿ.ಡಬ್ಲ್ಯೂ: 16

| | |
|---|---|
| ಸಾಕ್ಷಿಯ ಹೆಸರುಃ | ಶ್ರೀಮತಿ. ಶಾಂತವ್ವಾ ಹನುಮಂತ ದಂಡಗಲ್ |
| ಗಂಡನ ಹೆಸರುಃ | ಹನುಮಂತ ದಂಡಗಲ್ |
| ವಯಸ್ಸುಃ | 55 ವರ್ಷ |
| ಉದ್ಯೋಗಃ | ಕೂಲಿ ಕೆಲಸ |
| ವಾಸಃ | ಗಾಂಧಿನಗರ, ಖಾನಾಪೂರ |

**ದಿನಾಂಕಃ 10.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

1. ಸುರೇಶ ಬಂಡಿವಡ್ಡರ ಹಾಗೂ ಚಾಸಾಃ 1 ನನ್ನ ಅಕ್ಕನ ಮಕ್ಕಳು. ಚಾಸಾಃ 32 ರವರು ಸುರೇಶ ಬಂಡಿವಡ್ಡರ ರವರ ಹೆಂಡತಿ. ಸುರೇಶ ಬಂಡಿವಡ್ಡರ ಹಾಗೂ ಆತನ ಹೆಂಡತಿ ಚಾಸಾಃ 32 ಹಾಗೂ ಇಬ್ಬರು ಮಕ್ಕಳ ಸಮೇತ ಖಾನಾಪೂರದ ಗಾಂಧಿನಗರದ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದರು.

2. ಈ ಪ್ರಕರಣದ 1 ನೇ ಆರೋಪಿ ಹಾಗೂ ಚಾಸಾಃ 32 ರವರಿಗೆ ಸಂಬಂಧವಿದ್ದು ಈ ಬಗ್ಗೆ ಸುರೇಶ ಬಂಡಿವಡ್ಡರ ರವರಿಗೆ ತಿಳಿದು ಗಂಡ ಹೆಂಡತಿಯ ನಡುವೆ ಜಗಳವಾಗಿರುತ್ತದೆ. ಆನಂತರ ಚಾಸಾಃ 32 ರವರು ಮನೆ ಬಿಟ್ಟು ಹೋಗಿದ್ದು ಆನಂತರ ಆಕೆ ತನ್ನ ಗಂಡನಿಗೆ ಕರೆ ಮಾಡಿ ನಾನು ಬೆಳಗಾವಿಯಲ್ಲಿ ಇದ್ದೇನೆಂದು ಹೇಳಿದ್ದರಿಂದ ಆತ ಹೋಗಿ ಕರೆದುಕೊಂಡು ಬಂದಿದ್ದ.

3. ಈಗ್ಗೆ 6 ತಿಂಗಳ ಹಿಂದೆ 2 ನೇ ಆರೋಪಿಯು ನಮ್ಮನ್ನೆಲ್ಲಾ ಕರೆದು ಚಾಸಾಃ 32 ಹಾಗೂ ನನ್ನ ಮಗನ ಸಂಬಂಧದ ನಡುವೆ ಆಕೆ ಹಾಗೂ ಆಕೆಯ ಗಂಡನ ನಡುವೆ ಜಗಳ

ನಡೆಯುತ್ತಿದೆ ಅದಕ್ಕಾಗಿ ಪಂಚಾಯತಿ ಸೇರಿ ನನ್ನ ಮಗನಿಗೂ ಹಾಗೂ ಚಾಸಾಃ 32 ರವರಿಗೂ 4 ಬುದ್ಧಿಮಾತು ಹೇಳೋಣ ಬನ್ನಿ ಎಂದು ಖಾನಾಪೂರದ ಗಾಂಧಿನಗರದಲ್ಲಿರುವ ಮಾರುತಿ ಮಂದಿರಕ್ಕೆ ಕರೆದಿದ್ದ ಆದರೆ ಆತ ನಮ್ಮನ್ನೆಲ್ಲಾ ಕರೆಯಿಸಿ ಅಲ್ಲಿ ಸುರೇಶ ಬಂಡಿವಡ್ಡರ ನನ್ನು ಕೊಲೆ ಮಾಡುತ್ತಾನೆಂದು ನಮಗೆ ಗೊತ್ತಿರಲಿಲ್ಲ ಎಂದು ಹೇಳುತ್ತಾರೆ. ಅದರಂತೆ ನಾನು ಹಾಗೂ ಸುಮಾರು 10 ಮಂದಿ ದೇವಸ್ಥಾನಕ್ಕೆ ಸುಮಾರು 03.30 ಯಿಂದ 04.00 ಗಂಟೆ ಸಮಯಕ್ಕೆ ಹೋಗಿದ್ದೇವು. ಅಲ್ಲಿಗೆ ಸುರೇಶ ಬಂಡಿವಡ್ಡರ, ಆತನ ಹೆಂಡತಿ ಹಾಗೂ ಆತನ ತಮ್ಮ ಚಾಸಾಃ 1 ರವರು ಸಹ ಬಂದಿದ್ದರು. ಅಲ್ಲಿ ಸೇರಿದ್ದ ಕಾಲಕ್ಕೆ ಸುರೇಶ ಬಂಡಿವಡ್ಡರ 1 ನೇ ಆರೋಪಿಗೆ ನನ್ನ ಹೆಂಡತಿಯ ಜೊತೆ ಅಕ್ರಮ ಸಂಬಂಧ ಹೊಂದಿದ್ದೀಯಾ ಎಂದು ಒಂದು ಪೆಟ್ಟು ಕೊಟ್ಟನು ಆಗ ಜಗಳ ಪ್ರಾರಂಭವಾಯಿತು.

4. ಅಲ್ಲಿ 2 ನೇ ಆರೋಪಿಯು ಸುರೇಶ ಬಂಡಿವಡ್ಡರನ ಹೊಟ್ಟೆಗೆ, ಕುತ್ತಿಗೆಗೆ ಚಾಕುವಿನಿಂದ ಹಾಕಿರುತ್ತಾನೆ. ಆ ಕಾಲಕ್ಕೆ ಸಾಗರ ಅಷ್ಟೇಕರ ಬಿಡಿಸಲು ಹೋಗಿದ್ದು ಆಗ ಆತನ ಕೈಗೂ ಸಹ ಚಾಕುವಿನಿಂದ ಗಾಯವಾಗಿರುತ್ತದೆ. ಆನಂತರ ಈ ಪ್ರಕರಣದ ಮೂರು ಜನ ಆರೋಪಿತರು ಅಲ್ಲಿಂದ ಪರಾರಿಯಾಗಿರುತ್ತಾರೆ. ಆ ಕಾಲಕ್ಕೆ 1 ಮತ್ತು 3 ನೇ ಆರೋಪಿತರು ಸಹ ತಮ್ಮ ಕೈಗಳಿಂದ ಸುರೇಶ ಬಂಡಿವಡ್ಡರ ರವರಿಗೆ ಹಲ್ಲೆ ಮಾಡಿರುತ್ತಾರೆ.

5. ಘಟನೆಯಿಂದ ನನಗೆ ಬಹಳ ಗಾಬರಿಯಾಯಿತು. ನಂತರ ಅಂಬುಲೆನ್ಸ್ ನಲ್ಲಿ ಸುರೇಶ ಬಂಡಿವಡ್ಡರ ನನ್ನು ಮೊದಲು ಖಾನಾಪೂರದ ಆಸ್ಪತ್ರೆಗೆ ಕರೆದುಕೊಂಡು ಹೋಗಿ ನಂತರ ಬೆಳಗಾವಿಗೆ ಕರೆದುಕೊಂಡು ಹೋದರಂತೆ ಆ ಕಾಲಕ್ಕೆ ಆತ ಸತ್ತಿದ್ದಾನೆಂದು ತಿಳಿಯಿತು. ನಂತರ ಪೋಲೀಸರು ನನ್ನನ್ನು ವಿಚಾರಣೆ ಮಾಡಿದಾಗ ಈ ಮೇಲೆ ಹೇಳಿದಂತೆ ಹೇಳಿರುತ್ತೇನೆ. ನಂತರ ನಾನು ಈ ಬಗ್ಗೆ ಖಾನಾಪೂರದ ನ್ಯಾಯಾಲಯದಲ್ಲೂ ಸಹ ಈ ಮೇಲೆ ಹೇಳಿದಂತೆ ಹೇಳಿರುತ್ತೇನೆ.

6. ಈಗ ಅರಗಿನಿಂದ ಸೀಲ್ ಮಾಡಿ ಪ್ಯಾಕ್ ಮಾಡಿದ ಒಂದು ಪ್ಯಾಕೇಟನ್ನು ಮುಕ್ತ ನ್ಯಾಯಾಲಯದಲ್ಲಿ ತೆರೆದಿದ್ದು ಅದರಲ್ಲಿ ಒಂದು ದಾಖಲೆ ಇದ್ದು ಅದು BNSS ಕಲಂ 183

ರಡಿಯಲ್ಲಿ ನೀಡಿದ ಹೇಳಿಕೆ ಇದ್ದು ನೋಡಿ ಅದರಲ್ಲಿ ತನ್ನ ಹೆಬ್ಬೆಟ್ಟಿನ ಗುರುತು ಇದೆ ಎಂದು ಗುರುತಿಸುತ್ತಾರೆ. ಅದನ್ನು ಈಗ ನಿಪಿಃ 11 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 1 ರಿಂದ 3 ನೇ ಆರೋಪಿತರ ಪರ ಶ್ರೀ. ಎಂ.ಎಲ್.ಐ. ವಕೀಲರಿಂದಃ**

ಈ ಪ್ರಕರಣದಲ್ಲಿ ಆರೋಪಿತರು ಸಲ್ಲಿಸಿದ ಭಾರತೀಯ ನ್ಯಾಯ ಸುರಕ್ಷಾ ಸಂಹಿತಾ ಕಲಂ 254(3) ರ ಅರ್ಜಿಯನ್ನು ಈ ನ್ಯಾಯಾಲಯವು ಆದಾಗಲೇ ಪುರಸ್ಕರಿಸಿ ಈ ಪ್ರಕರಣದ ಎಲ್ಲಾ ಪ್ರತ್ಯಕ್ಷ ಸಾಕ್ಷಿಗಳ ಮುಖ್ಯ ವಿಚಾರಣೆ ಮುಗಿದ ನಂತರ ಅವರುಗಳ ಪಾಟೀ ಸವಾಲು ಮಾಡಲು ಅವಕಾಶ ನೀಡಿರುವುದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿದಂತೆ ಬೆರಳಚ್ಚು ಮಾಡಲಾಗಿ ನಂತರ ಓದಿ ಪರಿಶೀಲಿಸಲಾಯಿತು ಎಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ).

ಓ ಹೇ ಕೇ ಸರಿ ಇದೆ.

(ಗಂಗಾಧರ ಕೆ.ಎನ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.